ಓ.ಎಸ್.ನಂ.356-2022

ಪಿ.ಡಬ್ಲು-೧

ದಿ: 17.03.2026 ರಂದು ೨ನೇ ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ವಾಟೀ ಸವಾಲು**: ಪ್ರತಿವಾದಿಗಳ ಪರ ಶ್ರೀಯುತ ಬಿ.ಎಲ್.ಕೆ ವಕೀಲರಿಂದ.

ನಾನು ವಾದ ಪತ್ರದ ಅನುಸೂಚಿಯಲ್ಲಿ ಕಾಣಿಸಿರುವ ಎ ಅನುಸೂಚಿ ಆಸ್ತಿಗಳು ಮೂಲತ: ಕೆಂಪಣ್ಣ ರವರಿಗೆ ಸೇರಿದ ಆಸ್ತಿಗಳು ಆಗಿರುತ್ತದೆ. ಸದರಿ ದಾವಾ ಎ ಅನುಸೂಚಿ ಆಸ್ತಿಗಳು ಕೆಂಪಣ್ಣರವರಿಗೆ ಯಾವ ರೀತಿ ಬಂದಿರುತ್ತದೆ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗ್ರಾಮ ಪಂಚಾಯ್ತಿ ರಚನೆ ಆಗುವ ಪೂರ್ವದಿಂದಲೂ ಕೆಂಪಣ್ಣರವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಸದರಿ ಕೆಂಪಣ್ಣರವರಿಗೆ ಗ್ರಾಮ ಪಂಚಾಯ್ತಿರವರು ದಾವಾ ಎ ಅನುಸೂಚಿ ಆಸ್ತಿಗಳನ್ನು ನೀಡಿದ ಕುರಿತು ಹಕ್ಕುಪತ್ರಗಳು ಇವೆ ಸದರಿ ಹಕ್ಕು ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಸಾಕ್ಷಿಗೆ ವಾದಿಗಳ ಪರವಾಗಿ ನಿಶಾನಿಕರಿಸಲಾದ ದಾಖಲೆಗಳನ್ನು ತೋರಿಸಿ ಹಕ್ಕು ಪತ್ರಗಳನ್ನು ನೋಡಿ ಗುರುತಿಸುವಂತೆ ಸೂಚಿಸಿದ ಮೇರೆಗೆ ಸಾಕ್ಷಿಯು ದಾಖಲೆಗಳನ್ನು ನೋಡಿ ಹಕ್ಕು ಪತ್ರಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಗ್ರಾಮ ಪಂಚಾಯ್ತಿಯಿಂದ ಕೆಂಪಣ್ಣರವರಿಗೆ ದಾವಾ ಎ ಅನುಸೂಚಿ ಆಸ್ತಿಗಳ ಕುರಿತು ಯಾವುದೇ ಹಕ್ಕು ಪತ್ರಗಳನ್ನು ನೀಡಿರುವುದಿಲ್ಲ ಮತ್ತು ಆ ಕುರಿತು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಗ್ರಾಮ ಪಂಚಾಯ್ತಿಯಿಂದ ದಾವಾ ಎ ಅನುಸೂಚಿ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕುಪತ್ರಗಳನ್ನು ನೀಡಿರದ ಮೇರೆಗೆ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

2. ಆ ರೀತಿ ದಾವಾ ಎ ಅನುಸೂಚಿ ಆಸ್ತಿಯ ಯಾವೆಲ್ಲಾ ವಾದಿಗಳು ಎಷ್ಟು ವಿಸ್ತೀರ್ಣದ ಸ್ವಾಧೀನದಲ್ಲಿದ್ದಾರೆ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಮತ್ತು ಇತರ ವಾದಿಗಳು ಒಟ್ಟಿಗೆ ದಾವಾ ಎ ಅನುಸೂಚಿ ಆಸ್ತಿಯ ಜಂಟಿ ಸ್ವಾಧೀನದಲ್ಲಿರುತ್ತೇವೆ ಮತ್ತು ಯಾವುದೇ ವಿಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಎ ಅನುಸೂಚಿ ಆಸ್ತಿಯ ೧ನೇ ಐಟಂ ಆಸ್ತಿಯ ಪೂರ್ವಕ್ಕೆ ಸರ್ಕಾರಿ ಜಾಗ ಎಂದು ಕಾಣಿಸಿರುತ್ತೇನೆ ಎಂದರೆ ಸರಿ. ದಾವಾ ಎ ಅನುಸೂಚಿ ಆಸ್ತಿಯ 2ನೇ ಐಟಂ ಆಸ್ತಿಯ ಪೂರ್ವಕ್ಕೆ ಮುನಿಯಪ್ಪ ಬಿನ್ ಕುರಿ ಬೈರಪ್ಪರವರ ಆಸ್ತಿ ಎಂದು ಕಾಣಿಸಿರುತ್ತೇನೆ ಎಂದರೆ ಸರಿ. ಸದರಿ ಮುನಿಯಪ್ಪ ಬಿನ್ ಕುರಿಬೈರಪ್ಪ ರವರ ಆಸ್ತಿಯ ಕ್ರಮ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಮುನಿಯಪ್ಪ ಬಿನ್ ಕುರಿಬೈರಪ್ಪರವರ ಆಸ್ತಿಯು ಗ್ರಾಮ ಠಾಣಾ ಆಸ್ತಿ ಆಗಿರುತ್ತದೆ. ನಾನು ವಾದ ಪತ್ರದಲ್ಲಿ ಕಾಣಿಸಿರುವ ದಾವಾ ಎ ಅನುಸೂಚಿ ಆಸ್ತಿಗಳ ಚಕ್ಕುಬಂದಿಗಳಿಗೆ ಮತ್ತು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲೆಗಳಲ್ಲಿನ ಚಕ್ಕುಬಂದಿಗಳಿಗೆ ವ್ಯತ್ಯಾಸ ಇವೆ ಎಂದರೆ ಸರಿಯಲ್ಲ.

3. ನಿಪಿ.1 ರಲ್ಲಿ ದಾವಾ ಎ ಅನುಸೂಚಿ ಆಸ್ತಿಗಳ ಉತ್ತರ ಮತ್ತು ದಕ್ಷಿಣಕ್ಕೆ ಸ್ವಂತ ಜಮೀನು ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ಸದರಿ ನಿಪಿ.1 ರಲ್ಲಿ ಕಾಣಿಸಿರುವ ಉತ್ತರ ದಿಕ್ಕಿನ ಆಸ್ತಿಯ ಕ್ರಮ ಸಂಖ್ಯೆ 4/11 ಮತ್ತು ದಕ್ಷಿಣ ದಿಕ್ಕಿನ ಆಸ್ತಿಯ ಕ್ರಮ ಸಂಖ್ಯೆ 3/5 ಇರುತ್ತದೆ. ನಿಪಿ.1 ರಲ್ಲಿನ ಚಕ್ಕುಬಂದಿಗಳ ಕುರಿತು ಪಂಚಾಯ್ತಿಗೆ ಮಾಹಿತಿಯನ್ನು ನನ್ನ ಅಣ್ಣನಾದ ವೆಂಕಟೇಶ್ ರವರು ನೀಡಿರುತ್ತಾರೆ. ಪಂಚಾಯ್ತಿರವರು ದಾವಾ ಆಸ್ತಿಗೆ ಭೇಟಿ ನೀಡಿ ಚಕ್ಕುಬಂದಿಗಳನ್ನು ಬರೆದಿರುತ್ತಾರೆ. ಆ ರೀತಿ ಯಾವ ದಿನಾಂಕದಂದು ಪಂಚಾಯ್ತಿರವರು ದಾವಾ ಆಸ್ತಿಗೆ ಭೇಟಿ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಆ ರೀತಿ ಪಂಚಾಯ್ತಿರವರು ದಾವಾ ಆಸ್ತಿಗೆ ಭೇಟಿ ನೀಡಿ ಯಾವುದೇ ಪರಿಶೀಲನೆಯನ್ನು ಮಾಡಿರುವುದಿಲ್ಲ ಮತ್ತು ಆ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಪಂಚಾಯ್ತಿ

ಅಧೀಕಾರಿಗಳು ದಾವಾ ಆಸ್ತಿಗೆ ಭೇಟಿ ನೀಡಿದ್ದರೆ ನಿಪಿ.1 ರಲ್ಲಿ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿನ ಆಸ್ತಿಗಳ ಕ್ರಮ ಸಂಖ್ಯೆಗಳನ್ನು ಕಾಣಿಸುತ್ತಿದ್ದರು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾ ಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.